ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನನ್ನ ಹೆಸರು ಕರೆದ ತಕ್ಷಣ ಎದ್ದು ನಿಂತು ಗಮನ ಸೆಳೆದಿದ್ದೇನೆ. ಆಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು ನಂತರ ಅವರು ಒಂದು ನಿಲುವು ತೆಗೆದುಕೊಂಡು ವಾಕ್‌ಔಟ್ ಮಾಡಿದಾಗ, ಅದು ನನಗೂ ಒಮ್ಮತ ಇದ್ದುದರಿಂದ ವಾಕ್‌ಔಟ್ ಮಾಡಿ ವಾಪಸ್ಸು ಬಂದಿದ್ದೇನೆ. ಈಗಾಗಲೇ ನಾನು ಗಮನ ಸೆಳೆದಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಂಪ್ರದಾಯದ ಪ್ರಕಾರ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

## ಗಮನ ಸೆಳೆಯಂವ ಸೂಚನೆ

### ರಾಜ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಧರಣಿ ಮಂತ್ರಿ ಮುಷ್ಕರ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಧರಣಿ ಮತ್ತು ಮುಷ್ಕರದ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀಮತಿ ಮುನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಸಹಕಾರ ಇಲಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ.

ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ಹಾಗೂ ಸ್ವತಂತ್ರ ಸಂಸ್ಥೆಗಳಾಗಿವೆ. ಅವು ಕೇವಲ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುವವೇ ವಿನ: ಅವರ ಆಡಳಿತ ವೆಚ್ಚದ ಬಗ್ಗೆ ಸಹಕಾರಿ ಸಂಸ್ಥೆಗಳೇ ತಮ್ಮ ಉತ್ಪನವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕಾಗಿದೆ. ಸಹಕಾರಿ ಸಂಘಗಳಲ್ಲಿ ದುಡಿಯುವ ಈ ನೌಕರರ ವೇತನ ಇಂದಿನ ಪರಿಸ್ಥಿತಿಯಲ್ಲಿ ಗಮನಿಸಿದರೆ ಹೆಚ್ಚಿಸುವುದು ಅವಶ್ಯ. ಆದರೆ ಹೆಚ್ಚಳವಾದ ವೇತನವನ್ನು ಭರಿಸುವ ಸಾಮರ್ಥ್ಯ ಆಯಾ ಸಂಘಗಳಲ್ಲಿ ಗಳಿಸುವ ಆದಾಯ ಮಿತಿಯನ್ನು ಅವಲಂಬಿಸಿವೆ, ಈ ಸಂಘಗಳ ಉತ್ಪನ್ನವನ್ನು ಯಾವ ಮಾರ್ಗಗಳಿಂದ ಹೆಚ್ಚು ಮಾಡಬೇಕೆಂಬುದರ ಬಗ್ಗೆ ಸರ್ಕಾರ ತೀವ್ರ ಪರಿಶೀಲನೆ ಮಾಡುವ ಭರವಸೆ ಕೊಡುತ್ತಿದೆ. ಈಗಾಗಲೇ ಸಹಕಾರಿ ಅಧಿಕಾರಿಗಳೊಡನೆ ಹಾಗೂ ನೌಕರರ ಸಂಘಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿದ್ದೇನೆ. ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿಯಿಂದ ಉತ್ಪನ್ನವನ್ನು ಹೆಚ್ಚು ಮಾಡಲಿಕ್ಕೆ ಬರುತ್ತದೆಯೋ ಎಂಬುದನ್ನು ಸಹಕಾರಿ ಖಾತೆಯ ಅಧಿಕಾರಿಗಳೊಂದಿಗೆ ವಿಚಾರಿಸಿ, ವಿವರಗಳನ್ನು ಸಲ್ಲಿಸಲಿಕ್ಕೆ ತಿಳಿಸಲಾಗಿದೆ. ಅವರಿಂದ ಬರುವ ಅಂಶಗಳನ್ನು ಪರಿಶೀಲಿಸಿ, ಈ ನೌಕರರ ಬಗ್ಗೆ ಸಹಾನುಭೂತಿ ಪೂರಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಆದುದರಿಂದ ಎಲ್ಲ ಸಹಕಾರಿ ಸಂಘಗಳ ನೌಕರರು ಸಹಕಾರಿ ತತ್ವಗಳ ಮೇಲೆ ನಿಷ್ಠೆ ಇಟ್ಟು ತಮ್ಮ ತಮ್ಮ ಕಾರ್ಯಗಳಲ್ಲಿ ಮರಳಬೇಕೆಂದು ಮತ್ತು ತಮ್ಮ ಧರಣಿ ನಿಲುವನ್ನು ಅಂತ್ಯಗೊಳಿಸಬೇಕೆಂದು ಬಿನ್ನವಿಸಿಕೊಂಡಿರುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸನ್ಮಾನ್ಯ ಸಚಿವರಿಗೆ ತಮ್ಮ ಮೂಲಕ ಗಮನ ಸೆಳೆಯಂವ ಅಂಶ ಏನೆಂದರೆ, ಕಳೆದ ಒಂದು ನೂರು ದಿವಸಗಳಿಂದಲೂ ಈ ರಾಜ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರೆ ಎಲ್ಲರೂ ಸಹ ತಮ್ಮ ನ್ಯಾಯ ವಾದಂಥ ಬೇಡಿಕೆಯನ್ನು ಈಡೇರಿಸಬೇಕೆಂದು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಪಾರ್ಥ್ಯ ರಾಜ್ಯಪಾಲರನ್ನು ಭೇಟಿ ಮಾಡಿದ್ದರು. ಸಂಬಂಧಪಟ್ಟಂತಹ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿದ್ದರು. ಆದರೆ ಇದುವರೆಗೂ ಅವರಿಗೆ ನಿಶ್ಚಿತವಾದಂಥ ಯಾವುದೇ ಪರಿಹಾರ ಮಾರ್ಗವನ್ನು ಸೂಚಿಸದೇ ಇದ್ದುದರಿಂದ, ಅನಿರ್ಧಿಷ್ಟ ಧರಣಿ ಸತ್ಯಾಗ್ರಹವನ್ನು ಮುಂದುವರಿಸುತ್ತಿದ್ದಾರೆ. ಹಿಂದೆ ಈ ಒಂದು ಸಹಕಾರ ಸಂಘದ ನೌಕರರ ಒಂದು ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಹಿಂದಿನ ಸರ್ಕಾರ ಶ್ರೀ ಅಜ್ಜೀಬಾಳ್ ಹೆಗಡೆಯವರ ಅಧ್ಯಕ್ಷತೆಯಲ್ಲಿ ಒನ್ ಮ್ಯಾನ್ ಕಮಿಟಿ ಎಂದು ನೇಮಕ ಮಾಡಿದ್ದರು. ಇವರುಗಳ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಸಮಿತಿ ನೇಮಕ ಮಾಡಿದ್ದರು. ಮಾನ್ಯ ಅಜ್ಜೀಬಾಳ್ ಹೆಗಡೆಯವರು ಇದರ ಬಗ್ಗೆ ತಮ್ಮದೇ ಆದಂಥ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಈಗಾಗಲೇ ಈ ರೀತಿಯಲ್ಲಿ ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವಂಥ ನೌಕರರಿಗೆ

ಸಮಾನವಾದಂಥ ಒಂದು ವೇತನವನ್ನು ಸರ್ಕಾರಿ ನೌಕರರಿಗೆ ಕೊಡುತ್ತಿರುವಂತೆ ಕೊಡಬೇಕೆಂಬ ದೃಷ್ಟಿಯಿಂದ ಮಹಾರಾಷ್ಟ್ರ ಸರ್ಕಾರ ಒಂದು ಆರ್ಡರ್ ಹೊರಡಿಸಿದೆ. ಆರ್ಡರ್ ನಂ. ೧೯೮೯ ಸಿಆರ್ ೩೦ ದಿನಾಂಕ ೧೩-೧೦-೧೯೮೯ರಂದು ಮಹಾರಾಷ್ಟ್ರ ಸರ್ಕಾರ ಈ ಒಂದು ಕೋ ಆಪರೇಟೀವ್ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಸಹಕಾರಿ ನೌಕರರಿಗೆ ಸರ್ಕಾರಿ ಎಂಪ್ಲಾಯೀಸ್‌ಗೆ ಏನು ಕೊಡುತ್ತಿದ್ದಾರೆ ಅದೇ ರೀತಿ ಸವಲತ್ತು ಕೊಡುವ ಶೀರ್ಮಾನವನ್ನು ಮಹಾರಾಷ್ಟ್ರ ಸರ್ಕಾರ ಈಗಾಗಲೇ ಮಾಡಿದೆ. ಈ ರಾಜ್ಯದಲ್ಲಿ ಈ ಒಂದು ರಾಜ್ಯ ವ್ಯವಸಾಯೋತ್ಪನ್ನ ಸಹಕಾರ ಸಂಘದಲ್ಲಿ ಸುಮಾರು ಇಪ್ಪತ್ತು ಸಾವಿರ ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಸುಮಾರು ಏಳೆಂಟು ಸಾವಿರ ಜನರು ಬರುವ ನಾಲ್ಕೈದು ವರ್ಷಗಳಲ್ಲಿ ರಿಟೈರ್ ಆಗುವವರಿದ್ದಾರೆ. ಅಲ್ಲಿರುವಂತ ಜನರು ಒಂದು ನೂರು ರೂಪಾಯಿನಿಂದ ಐದುನೂರು, ಆರು ನೂರು ರೂಪಾಯಿಗಳವರೆಗೆ ಸಂಬಳ ಪಡೆಯುತ್ತಿದ್ದಾರೆ. ಅವರು ಸುಮಾರು ಇಪ್ಪತ್ತು, ಮುವತ್ತು ವರ್ಷಗಳಿಂದಲೂ ಕೆಲಸವನ್ನು ಮಾಡುತ್ತಿದ್ದಾರೆ. ಆದರೂ ಸಹ ಅವರಿಗೆ ಸರ್ಕಾರಿ ನೌಕರರಿಗೆ ಸಮಾನವಾದಂಥ ವೇತನ ಸಿಕ್ಕುತ್ತಿಲ್ಲ. ಆದ್ದರಿಂದ ಅವರ ಬೇಡಿಕೆ ಏನೆಂದರೆ, ರಾಜ್ಯ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರಿಗೆ ರಾಜ್ಯ ಸರ್ಕಾರ ನಾಗರೀಕ ಸೇವಾ ನಿಯಮಗಳನ್ನು ಜಾರಿಗೆ ಕೊಡುವುದು, ರಾಜ್ಯ ಸರ್ಕಾರಿ ನೌಕರರಿಗೆ ಕೊಡುತ್ತಿರುವ ವೇತನ ಶ್ರೇಣಿ ಸೌಲಭ್ಯ ಕೊಡುವುದು, ಬೋನಸ್ ಕೊಡುವುದು ಮಧ್ಯಂತರ ಪರಿಹಾರ ನೀಡುವುದು, ದಿನಗೂಲಿ, ಹಂಗಾಮಿ ನೌಕರರನ್ನು ಖಾಯಂ ಮಾಡಬೇಕೆನ್ನುವುದು ಅವರ ಬೇಡಿಕೆ ಆಗಿವೆ. ಈ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾ ಹೆಚ್ಚಳವಾದ ವೇತನವನ್ನು ಭರಿಸುವ ಸಾಮರ್ಥ್ಯ ಆಯಾ ಸಂಘಗಳಲ್ಲಿ ಗಳಿಸುವ ಆದಾಯದ ಮಿತಿಯನ್ನು ಅವಲಂಬಿಸಿದೆ ಎಂದು ಹೇಳಿದ್ದಾರೆ. ಈ ಸಂಘಗಳ ಉತ್ಪನವನ್ನು ಯಾವ ಮಾರ್ಗಗಳಿಂದ ಹೆಚ್ಚು ಮಾಡಬೇಕೆಂಬುದರ ಬಗ್ಗೆ ಸರ್ಕಾರ ತೀವ್ರ ಪರಿಶೀಲನೆ ಮಾಡುತ್ತಿದೆಂಬ ಭರವಸೆ ಕೊಟ್ಟಿದ್ದಾರೆ. ಅಧ್ಯಕ್ಷರೆ, ಈ ಸಹಕಾರ ಸಂಘಗಳಿಗೆ ಹೆಚ್ಚು ಆದಾಯವನ್ನು ತಂದು ಸಂಬಳವನ್ನು ಹೆಚ್ಚು ಕೊಡುವಂಥ ಶಕ್ತಿ ಇಲ್ಲ. ಕಾರಣ ಅಂದರೆ ಅನೇಕ ಸಂಘಗಳಲ್ಲಿ ಸರ್ಕಾರದ ಒಂದು ಆರ್ಥಿಕ ನೀತಿಯ ಕಾರಣದಿಂದ ಸಾಕಷ್ಟು ವ್ಯವಹಾರ ನಡೆಯದೇ ಇರುವುದರಿಂದ ಅಲ್ಲಿಯ ನೌಕರರಿಗೆ ಕೊಡುವಂಥ ಮೂರು ನೂರು ರೂಪಾಯಿ, ನಾಲ್ಕು ನೂರು ರೂಪಾಯಿ ಸಂಬಳವನ್ನು ನಾಲ್ಕೈದು ತಿಂಗಳು ಗಳಾದರೂ ಕೊಟ್ಟಿಲ್ಲ. ಆ ಒಂದು ಪರಿಸ್ಥಿತಿಗೆ ಸಹಕಾರ ಸಂಘಗಳು ಬಂದು ತಲುಪಿವೆ. ಸರ್ಕಾರ ಬಡ್ಡಿ ಸಬ್ಸಿಡಿ ಮನ್ನಾ ಮಾಡಿದಾಗ ಆ ಹಣವನ್ನು ಕೊಡದೆ, ಸಹಕಾರ ಸಂಘಗಳು ಅವ್ಯವಸ್ಥೆಯ ಹಂತಕ್ಕೆ ಬರುವ ಸಂದರ್ಭ ಬಂದಿದೆ. ಮಾನ್ಯ ಸಚಿವರಲ್ಲಿ ನಾನು ಏನಂತಿ ಮಾಡಿಕೊಳ್ಳುವುದು ಇಷ್ಟೆ, ಈ ಒಂದು ಸಂಘದ ನೌಕರರು ತಪ್ಪಿಲ್ಲಿ ಚರ್ಚೆ ಮಾಡಿದಾರೆ ತಾವು ಸರಿಯಾದ ತೀರ್ಮಾನವನ್ನು ತೆಗೆದುಕೊಂಡು ನ್ಯಾಯ ಒದಗಿಸಿಕೊಡುತ್ತೇನೆ ಎಂಬ ಭರವಸೆಯನ್ನು ಕೊಟ್ಟಿದ್ದೀರಿ. ತಾವು ಭರವಸೆ ಕೊಡದೇ ಇದ್ದರೆ ತಪ್ಪಾಗುತ್ತದೆ ಯಾವುದೇ ಸರ್ಕಾರಿ ನೌಕರರಿಗೂ ಅವನು ಮಾಡುವಂಥ ಕೆಲಸಕ್ಕೆ ಸರಿಸಮಾನಾದ ಸಂಬಳ ಕೊಡುವಂಥ ವ್ಯವಸ್ಥೆ ಇರುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರು ನೂರು, ಇನ್ನೂರು ರೂಪಾಯಿಗಳ ಸಂಬಳದಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ.

ಆದ್ದರಿಂದ ನಾನು ಹೇಳುವುದೇನೆಂದರೆ ನಮ್ಮ ಸರ್ಕಾರಿ ನೌಕರರಿಗೆ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಿಗನುಸಾರವಾಗಿ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದೀರೋ ಅದೇ ರೀತಿ ಈ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರಿಗೂ ಸೌಲಭ್ಯಗಳನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈಗ ಹಾಲಿ ಇರತಕ್ಕ ಸಹಕಾರ ಸಂಘಗಳ ದಂಡಿಮೆಯ ಲಾಭದ ಆಧಾರದ ಮೇಲೆ ಈ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದಾರೆ. ಇವತ್ತು ಸಾವಿರಾರು ಜನರು ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಬೇರೆ ಸರ್ಕಾರೀ ನೌಕರರಿಗೆ ಏನು ಅನುಕೂಲವನ್ನು ಮಾಡಿಕೊಡುತ್ತಿದ್ದೀರೋ ಅದೇ ರೀತಿ ಈ ವ್ಯವಸಾಯೋತ್ಪನ್ನ ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೂ ಸೌಲಭ್ಯಗಳನ್ನೊದಗಿಸಿಕೊಡಬೇಕು. ಮಹಾರಾಷ್ಟ್ರ ಸರ್ಕಾರದವರೂ ಕೂಡ ಅಲ್ಲಿನ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ನೌಕರರ ಸಮಸ್ಯೆಗಳು ಏನು ಅನೇಕ ವರ್ಷಗಳಿಂದ ಇದ್ದವು ಅವನ್ನೆಲ್ಲಾ ಸಮಗ್ರವಾಗಿ ಪರಿಶೀಲಿಸಿ ಸರ್ಕಾರೀ ನೌಕರರಿಗೆ ಕೊಡುತ್ತಿರುವ ಸೌಲಭ್ಯಗಳನ್ನೆಲ್ಲಾ ಇವರಿಗೂ ಕೊಡಬೇಕೆಂದು ತೀರ್ಮಾನಿಸಿ ಅಲ್ಲಿನ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುತ್ತಾ ಈ ನೌಕರರ ಬೇಡಿಕೆಗಳನ್ನು ಪರಿಶೀಲಿಸಿ ಈಡೇರಿಸುವುದಾಗಿ ಹೇಳಿದರು. ಸ್ವಾಮಿ, ಈ ನೌಕರರು ಕಳೆದ ೧೦೦ ದಿನಗಳಿಂದ ಮುಷ್ಕರವನ್ನು ಮಾಡುತ್ತಿದ್ದಾರೆ. ಆದ್ದರಿಂದ ಮೊದಲು ಅವರ ಸಮಸ್ಯೆಯನ್ನು ಪರಿಹಾರ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಅಧ್ಯಕ್ಷರೇ, ಈ ದೇಶಕ್ಕೆ ಅನ್ನವನ್ನು ಕೊಡತಕ್ಕವನು ರೈತ. ಅವನು ಇಂದು ಸಾಲಸೋಲಗಳಿಂದ ತತ್ತರಿಸಿ ಅಸ್ತಿಪಂಜರವಾಗಿದ್ದಾನೆ. ಅವನ ಅಳಿವು ಉಳಿವಿನ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಕಳೆದ ೨–೩ ದಿನಗಳಿಂದ ಒಂದೇ ಸಮನೆ ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈ ರೈತರ ಅಳಿವು ಉಳಿವನ್ನು ಗಮನಿಸುವಂಥ ಈ ವ್ಯವಸಾಯೋತ್ಪನ್ನ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ನೌಕರರ ಪರಿಸ್ಥಿತಿಯೂ ಕೂಡ ತ್ರಿಶಂಕು ಸ್ವರ್ಗವಾಗಿದೆ ಎಂದರೆ ತಪ್ಪಾಗಲಾರದು. ಈ ನೌಕರರು ಕಳೆದ ೧೦೦ ದಿವಸಗಳಿಂದ ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಿರುವುದು ಈ ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ಸುಮಾರು ೨೦ ಸಾವಿರ ನೌಕರರು ಇಡೀ ರಾಜ್ಯಾದ್ಯಂತ ಮುಷ್ಕರ ಮಾಡುತ್ತಿದ್ದಾರೆ. ಈ ನೌಕರರು ಏನಾದರೂ ತಪ್ಪು ಮಾಡಿದರೆ ಕಾನೂನು ಪ್ರಕಾರ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳತಕ್ಕ ಅಧಿಕಾರ ಸರ್ಕಾರಕ್ಕಿದೆ. ಆದರೆ ಬೇರೆ ನೌಕರರಿಗೆ ಕೊಡುವಂತೆ ಸಂಬಳ ಸಾರಿಗೆಗಳನ್ನು ಈ ನೌಕರರಿಗೂ ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದಾಗಲಿ ಸಮಾನ ಕೆಲಸಕ್ಕೆ ಸಮಾನ ವೇತನ ಇಲ್ಲವೆಂದು ಹೇಳುವುದಾಗಲಿ ಒಂದು ಶೋಚನೀಯ ಸಂಗತಿ. ಅವರು ತಾ ೧೫–೬–೮೯ ರಿಂದ ತಮ್ಮ ಮುಷ್ಕರವನ್ನು ಮಾಡುತ್ತಿದ್ದಾರೆ. ಮಾನ್ಯ ರಾಜ್ಯಪಾಲರ ಅಧಿಕಾರಾವಧಿಯಲ್ಲಿಯೂ ಕೂಡ ಅವರು ರಾಜ್ಯಪಾಲರನ್ನು ಕಂಡು ತಮ್ಮ ಬೇಡಿಕೆಗಳನ್ನು ಅವರ ಮುಂದಿಟ್ಟು ಈ ವ್ಯವಸಾಯೋತ್ಪನ್ನ ಸಹಕಾರಿ ಸಂಘಗಳ ನೌಕರರಿಗೆ ಇಂಥ ಅನ್ಯಾಯವಾಗುತ್ತಿದೆ ಇದನ್ನು ಸರಿಪಡಿಸಬೇಕೆಂದು ಮನವಿ ಕೊಟ್ಟರೂ ಕೂಡ ರಾಜ್ಯಪಾಲರು ಮಧ್ಯೆ ಪ್ರವೇಶ ಮಾಡಲಿಲ್ಲ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದಂತೆ ಅವರಿಗೆ ಏನು ಅನ್ಯಾಯವಾಗಿದೆ ಅದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಸಂಬಂಧಪಟ್ಟವರನ್ನು ಕರೆಸಿಕೊಂಡು ತೀವ್ರವಾಗಿ ಅವರ ಸಮಸ್ಯೆಯನ್ನು ಬಗೆಹರಿಸುವುದಾಗಿ ಭರವಸೆ ಕೊಟ್ಟು ಅವರು ತಮ್ಮ ಮುಷ್ಕರವನ್ನು ನಿಲ್ಲಿಸುವಂತೆ ಹೇಳಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ).—ಮಾನ್ಯ ಅಧ್ಯಕ್ಷರೇ, ಕಳೆದ ೧೦೦ ದಿನಗಳಿಂದ ಅವರು ಮುಷ್ಕರವನ್ನು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಂಪರ್ಕ ಮಾಡಿ ನೋಡುತ್ತೇನೆ ಎಂದು ಮಾನ್ಯ ಸಚಿವೆಯವರು ಹೇಳುತ್ತಿದ್ದಾರೆ. ಇಷ್ಟು ದಿವಸದಿಂದ ಇವರ ಗಮನಕ್ಕೆ ಈ ವಿಚಾರ ಬಂದಿರಲಿಲ್ಲವೇ ? ಆದರೂ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ?

ಅಧ್ಯಕ್ಷರು.— ಇವರು ಮಂತ್ರಿಗಳಾಗಿ ಕೇವಲ ೧೫ ದಿವಸಗಳಾಗಿದೆ ಅಷ್ಟೆ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್.— ಮೊದಲು ಇವರಿಗೆ ಗೊತ್ತಿರಲಿಲ್ಲವೇ ? ಇವತ್ತು ಈ ನೌಕರರ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಮಹಾರಾಷ್ಟ್ರ ಸರ್ಕಾರದವರು ಅಲ್ಲಿಯ ವ್ಯವಸಾಯೋತ್ಪನ್ನ ಸಹಕಾರ ಸಂಘಗಳವರಿಗೆ ಕೊಡುತ್ತಿರುವ ಸಹಾಯಧನದ ಪ್ರಕಾರ ಈ ಸರ್ಕಾರವು ೫೦ ಪರ್ಸೆಂಟ್ ಹಣವನ್ನು ಕೊಟ್ಟರೆ ಅವರಿಗೆ ಸುಮಾರು ೮ ಕೋಟಿ ರೂಪಾಯಿ ಸಿಕ್ಕುತ್ತದೆ. ಇದರಿಂದ ಅವರಿಗೆ ಅನುಕೂಲವಾಗುತ್ತದೆ. ಆದರೆ ಈಗ ಆ ನೌಕರರು ಮುಷ್ಕರ ಮಾಡುತ್ತಿರುವುದರಿಂದ ಎಲ್ಲ ಸಹಕಾರ ಸಂಘಗಳ ಕೆಲಸವೂ ನಿಂತು ಹೋಗಿದೆ. ಒಂದು ಐ. ಪಿ. ಸೆಟ್ ಬಗ್ಗೆ ಸಹಿ ಹಾಕಬೇಕಾದರೂ ಅಲ್ಲಿ ಕಾರ್ಯದರ್ಶಿ ಇಲ್ಲ. ಆದ್ದರಿಂದ ಅವರ ಬೇಡಿಕೆಗಳನ್ನು ಕೂಡಲೇ ಈಡೇರಿಸಿ ಕೊಡಿ. ಈಗ ೫ ವರ್ಷ ಅನುದಾನವೆಂದು ಕೊಟ್ಟಿದ್ದೀರಿ. ನಾನು ಡಿ. ಸಿ. ಸಿ. ಬ್ಯಾಂಕ್‌ನ ಅಧ್ಯಕ್ಷನಾಗಿರುವುದರಿಂದ ನನಗೆ ಈ ವಿಚಾರ ಗೊತ್ತಿದೆ. ಸಂಘದ ಪರಿಸ್ಥಿತಿ ಚೆನ್ನಾಗಿಲ್ಲ ಆದ್ದರಿಂದ ಸರ್ಕಾರದವರು ೫೦ ಪರ್ಸೆಂಟ್ ಹಾಕಿಕೊಂಡು ಡಿ. ಸಿ. ಸಿ. ಬ್ಯಾಂಕ್‌ನವರು ೧೦ ಪರ್ಸೆಂಟ್, ಅಪೆಕ್ಸ್ ಬ್ಯಾಂಕ್‌ನವರು ೧೦ ಪರ್ಸೆಂಟ್ ಹಾಕಿ ಈ ಸಂಘಕ್ಕೆ ಕೊಡಬೇಕು. ಇಲ್ಲಿ ಒಂದು ಆರ್ಡರ್ ಇದೆ. ಅದನ್ನು ತಮಗೆ ಕೊಡುತ್ತೇನೆ. ತಾವು ಏನಾದರೂ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡು ಅವರನ್ನು ವಾಪಸ್ ಕಳುಹಿಸಬೇಕು. ಇಲ್ಲದಿದ್ದರೆ ಸಂಘಗಳು ಮುಳುಗಿ ಹೋಗುತ್ತವೆ ರೈತರು ಬಹಳ ನೊಂದಿರುತ್ತಾರೆ. ಅವರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದ್ದರಿಂದ ಒಂದು ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ್ (ಮಂಡ್ಯ).— ಮಾನ್ಯ ಅಧ್ಯಕ್ಷರೇ, ಸಹಕಾರಿ ನೌಕರರು ಏನು ಒಂದು ಬೇಡಿಕೆಯನ್ನು ತಮ್ಮ ಮುಂದೆ ಇಟ್ಟಿದ್ದಾರೆ ಅದನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅವರ ಒಂದು ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಅವರ ಮನಸ್ಸನ್ನು ಒಲಿಸಬೇಕು. ಅದಕ್ಕೆ ಪುಷ್ಟಿ ಕೊಡುವಂತೆ ಸರ್ಕಾರದವರು ತಮ್ಮ ಉತ್ತರವನ್ನು ಹೇಳಬೇಕು. ಸಹಕಾರಿ ಇಲಾಖೆಯ ಪ್ರತಿನಿಧಿಗಳನ್ನು ಕರೆಸಿ ಅವರೊಡನೆ ಸಮಾಲೋಚನೆ ನಡೆಸಿ ಅವರು ತಮ್ಮ ಮುಷ್ಕರವನ್ನು ವಾಪಸ್

ತೆಗೆದುಕೊಳ್ಳುವಂತೆ ಮಾಡುವುದು ಸರ್ಕಾರದ ಕರ್ತವ್ಯವೂ ಆಗಿದೆ. ಆದ್ದರಿಂದ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಅವರಿಗೆ ಒಂದು ನಿರ್ದಿಷ್ಟವಾದ ಕಾಲವನ್ನು ಕೊಡುವ ಆಶ್ವಾಸನೆಯನ್ನು ಕೂಡ ಕೊಟ್ಟು ಅವರು ತಮ್ಮ ಮುಷ್ಕರವನ್ನು ವಾಪಸ್ ತೆಗೆದುಕೊಳ್ಳುವಂಥ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ (ಹೂವಿನ ಹಿಪ್ಪರಗಿ).— ಮಾನ್ಯ ಅಧ್ಯಕ್ಷರೇ, ನಮ್ಮ ಬಹಳಷ್ಟು ಜನ ಸನ್ಮಾನ್ಯ ಸದಸ್ಯರು ರೈತರ ಕಷ್ಟ ಕಾರ್ಪಣ್ಯಗಳ ಬಗ್ಗೆ ಬಹಳ ಸಹೃದಯದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಮಾತನಾಡಿದ್ದಾರೆ. ಅವರ ಸಾಲವನ್ನು ಮನ್ನಾ ಮಾಡಬೇಕೆಂದು ಕೂಡ ಸಲಹೆ ಮಾಡಿದ್ದಾರೆ. ಸಾಲ ಮನ್ನಾ ಮಾಡಿದರೆ ಮಾತ್ರ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ರೈತರ ಸರ್ವತೋಮುಖ ಅಭಿವೃದ್ಧಿಯತ್ತಲೂ ಸರ್ಕಾರದವರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ರೈತರ ಏಳಿಗೆಯಾಗಬೇಕಾದರೆ ಕೃಷಿ ಕ್ಷೇತ್ರದಲ್ಲಿ ಒಂದು ಮಹತ್ತರವಾದ ಕ್ರಾಂತಿಯೇ ಆಗಬೇಕಾಗಿದೆ. ಇವತ್ತಿನ ದಿವಸ ಸಹಕಾರಿ ಆಂದೋಲನ ಜಾಗೃತವಾಗಬೇಕು. ರೈತರ ಸಿರನಾಡಿಯಂತಿರುವ ಸಹಕಾರಿ ಸಂಘಗಳು ಜಾಗೃತವಾಗದಿದ್ದರೆ ರೈತರನ್ನು ಉದ್ಧಾರ ಮಾಡತಕ್ಕಂಥ ಸರ್ಕಾರದ ಕನಸು ಏನು ಇದೆ ಅದನ್ನು ನನಸಾಗಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನಿಂದ ಸರಿಯಾಗಿ ಮೂರು ದಿವಸಗಳಿಂದ ಯಾರು ರೈತರ ಬೆನ್ನೆಲುಬು ಎಂದು ಹೇಳಿಕೊಳ್ಳುತ್ತಾರೆ. ಈ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಅವರು ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳನ್ನು ತಾವು ಸಹಾನುಭೂತಿಯಿಂದ ಮಾನವೀಯತೆಯ ದೃಷ್ಟಿಯಿಂದ ವಿಚಾರ ಮಾಡಬೇಕಾದ ಅವಶ್ಯಕತೆ ಬಹಳ ಇದೆ. ಸಹಕಾರಿ ಸಂಘದಲ್ಲಿರತಕ್ಕಂಥ ನೌಕರರಿಗೆ ಒಂದು ಸೊಸೈಟಿಯಲ್ಲಿ ಇನ್ನೂರು ರೂಪಾಯಿಗಳಿಂದ ಏಳನೂರು ರೂಪಾಯಿಗಳವರೆಗೆ ಸಂಬಳವನ್ನು ಕೊಡುತ್ತಿರುತ್ತಾರೆ. ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ಅವರ ಸಾಂಪತ್ತಿಕ ಪರಿಸ್ಥಿತಿಯನ್ನು ನೋಡಿಕೊಂಡು ಪಗಾರವನ್ನು ಕೊಡುತ್ತಾ ಬಂದಿರುತ್ತಾರೆ. ಇವತ್ತಿನ ದಿವಸ ಸರ್ಕಾರ ಏನು ಮಾಡಿದೆ ಎಂದರೆ ಅವರನ್ನು ಯಾವುದೇ ಸಹಕಾರಿ ಸಂಸ್ಥೆಗೆ ವರ್ಗ ಮಾಡುವಂಥ ಅಧಿಕಾರವನ್ನು ಸಹಕಾರಿ ಇಲಾಖೆ ಇಟ್ಟುಕೊಂಡಿದೆ. ಇಂಥ ಒಂದು ಅಧಿಕಾರವನ್ನು ಈ ಇಲಾಖೆಯವರು ಏತಕ್ಕೆ ಇಟ್ಟುಕೊಂಡಿರುತ್ತಾರೆಯೋ ಗೊತ್ತಿಲ್ಲ; ಏಕೆಂದರೆ ಮೂನೂರು ರೂಪಾಯಿ ಸಂಬಳವನ್ನು ಕೊಡುತ್ತಿರುವ ಸಂಸ್ಥೆಯಿಂದ ಇನ್ನೂರು ರೂಪಾಯಿಗಳ ಸಂಬಳವನ್ನು ಕೊಡುವ ಸಂಸ್ಥೆಗೆ ನೌಕರರನ್ನು ವರ್ಗಾವಣೆ ಮಾಡಿದರೆ ಅವರ ಸ್ಥಿತಿ ಏನಾಗುತ್ತದೆಂಬುದನು ಯೋಚನೆ ಮಾಡಬೇಕು. ಅವನು ತನ್ನ ಊರಿನಲ್ಲಿ ಇದ್ದುಕೊಂಡು ತನ್ನ ಕುಟುಂಬದ ಜೀವನೋಪಾಯವನ್ನು ನಡೆಸುತ್ತಿರುವಾಗ ಬೇರೆ ಊರಿಗೆ ವರ್ಗಾವಣೆ ಮಾಡಿದರೆ ಇನ್ನೂರು ರೂಪಾಯಿ ಪಗಾರವನ್ನು ತೆಗೆದುಕೊಂಡು ಅವರ ಸಂಸಾರವನ್ನು ನಿರ್ವಹಿಸಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ವಿಚಾರವನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸಹಕಾರಿ ಇಲಾಖೆ ಬಹಳ ಬೃಹತ್ತಾದ ಇಲಾಖೆ. ಸರ್ಕಾರ ತನ್ನ ಹಣಕಾಸಿನ ಸ್ಥಿತಿಯನ್ನು ನೋಡಿಕೊಂಡು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ, ಸರ್ಕಾರದವರು ಇದರ ಬಗ್ಗೆ ಒಂದು ಸಮಿತಿಯನ್ನೇ ನೇಮಕ ಮಾಡಿ ಉಳಿದ ನೌಕರರಿಗೆ ಯಾವ ರೀತಿ ಸಹಾಯ ಸೌಕರ್ಯಗಳನ್ನು ಕೊಡುತ್ತಾರೆಯೋ ಅದೇ ರೀತಿಯಲ್ಲಿ ಕೆ.ಸಿ.ಎಸ್ ಆರ್. ನಿಯಮಾವಳಿಯ ಪ್ರಕಾರ ಈ ನೌಕರರಿಗೂ ಸಹಾಯ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸಹಕಾರ ಸಂಘದ ನೌಕರರು ಏನು ಕೇಂದ್ರ ಕಾರ್ಯಾಲಯದ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ, ಆಲ್ಲಿಗೆ ನಾನು ಹೋಗಿದ್ದೆ. ಅವರ ಪರಿಸ್ಥಿತಿ ಬಹಳ ಗಂಭೀರವಾದಂದಾಗಿದೆ. ಅವರ ಸತ್ಯಾಗ್ರಹದಿಂದಾಗಿ ರೈತರಿಗೂ ಶೋಚನೀಯ ಪರಿಸ್ಥಿತಿ ಉಂಟಾಗಿದೆ. ರೈತರು ಹಾಗೂ ಸಹಕಾರ ಸಂಘಗಳ ನೌಕರರು ಸಂಗಮ ಇದ್ದಹಾಗೆ. ಆದರೆ ಈಗ ಇಪ್ಪತ್ತು ಸಾವಿರ ಜನ ನೌಕರರು ಸತ್ಯಾಗ್ರಹ ಮಾಡುತ್ತಿರುವುದರಿಂದ ರೈತರಿಗೆ ಒಂದು ರೀತಿಯ ತೊಂದರೆಯ ಪರಿಸ್ಥಿತಿ ಉಂಟಾಗಿದೆ. ನಾನು ಮಂತ್ರಿಗಳನ್ನು ಪ್ರಾರ್ಥಿಸುವುದು ಇಷ್ಟೆ, ತಮಗೆ ಅವರು ಮನವಿ ಕೊಟ್ಟಿದ್ದರೂ ಅವರನ್ನು ನೀವು ಕರೆಸಿಲ್ಲ. ತಾವು ದಯವಾಡಿ ಇದನ್ನು ಪ್ರತಿಷ್ಠೆ ಪ್ರಶ್ನೆಯಾಗಿ ಇಟ್ಟುಕೊಳ್ಳದೆ ಅವರ ಮನವಿಗೆ ಬೆಲೆ ಕೊಟ್ಟು ಕರೆಸಿ, ಸರ್ಕಾರಿ ನೌಕರರು ಬೇರೆ ಈ ನೌಕರರು ಬೇರೆ ಎಂದು ತಾರತಮ್ಯ ಮಾಡದೆ ಆದಷ್ಟು ಬೇಗ ಅವರಿಗೆ ಅನುಕೂಲವಾಗುವಂಥ ಪರಿಸ್ಥಿತಿಯನ್ನು ಉಂಟುಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ —ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೌಕರರಸಂಘದ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಅವರೊಡನೆ ಮಾತುಕತೆ ನಡೆಸುವ ಸಂದರ್ಭದಲ್ಲಿ ಸ್ಟ್ರೈಕ್ ಅನ್ನು ಕಾಲ್ ಆಫ್ ಮಾಡುವ ಬಗೆ ಒಪ್ಪಿಗೆ ಕೊಡದಿದ್ದರೆ

ಬಹಳ ತೊಂದರೆಯಾಗುತ್ತದೆ. ಫುಡ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಎರಡು ತಿಂಗಳಿಂದ ತಪ್ಪಿಹೋಗಿ ಜನರಿಗೆ ಬಹಳ ತೊಂದರೆಯಾಗಿದೆ ಅವರು ಮಾಡುವ ಮುಷ್ಕರವನ್ನು ಮೊದಲಂ ನಿಲ್ಲಿಸಬೇಕು. ಆ ದಿಸೆಯಲ್ಲಿ ತಾವ ಭರವಸೆ ಕೊಡಬೇಕಂ. ತಾವು ಸಹಾನುಭೂತಿಯ ಕಾರ್ಯಕ್ರಮಂ ತೆಗೆದುಕೊಳ್ಳುವುದಾಗಿ ಹೇಳಿದಿರಿ. ಬರೀ ಸಹಾನುಭೂತಿಯನ್ನು ವ್ಯಕ್ತಿಪಡಿಸಿದರೆ ಸಾಲದಂ. ಅವರ ಬೇಡಿಕೆಗಳನ್ನು ಇಷ್ಟು ದಿನಗಳಲ್ಲಿ ಈಡೇರಿಸುತ್ತೇವೆಂದು ಭರವಸೆ ಕೊಟ್ಟು ನಾಳೆಯಿಂದಲೇ ಅವರು ಮುಷ್ಕರವನ್ನು ಮುಂದುವರಿಸದಂತೆ ಮಾಡಬೇಕು ಅವರು ಮುಷ್ಕರವನ್ನು ನಿಲ್ಲಿಸಿ ಫುಡ್ ಡಿಸ್ಟ್ರಿಬ್ಯೂಷನ್ ಕೆಲಸಗಳಿಗೆ ಹಾಜರಾಗಬೇಕು, ಆ ರೀತಿಯ ಆಶ್ವಾಸನೆಯನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬನ್ನಿಕೋಡು ಸಪ್ಪ ಹನುಮಂತಪ್ಪ.—ಮಾನ್ಯ ಅಧ್ಯಕ್ಷರೆ, ಈ ಒಂದು ವಿಷಯು ಬಹಳ ಗಂಭೀರವಾದುದು. ಗ್ರಾಮಾಂತರ ಪ್ರದೇಶದ ಜನರ ಹೃದಯದಂತೆ ಇರತಕ್ಕ ಸಹಕಾರಿ ಸಂಸ್ಥೆಗಳು ಈ ರಾಜ್ಯದಲ್ಲಿ ಎಲ್ಲಿಯವರೆಗೆ ಸುಧಾರಿಸುವುದಿಲ್ಲವೋ ಹಾಗೂ ಸುವ್ಯವಸ್ಥಿತವಾಗಿ ನಡೆಯುವುದಿಲ್ಲವೋ ಅಲ್ಲಿಯವರೆಗೆ ಗ್ರಾಮಾಂತರ ಪ್ರದೇಶದ ಜನರ ಜೀವನ ಸುಧಾರಣೆಯಾಗುವುದಿಲ್ಲ. ಈ ಸಹಕಾರಿ ಆಂದೋಳನ ಪ್ರಜಾಪ್ರಭುತ್ವದ ಬುನಾದಿ ಎಂಬ ಮಾತನ್ನು ಯಾರೂ ಮರೆಯಬಾರದು. ಸಹಕಾರ ಸಂಘದ ನೌಕರರಿಗೆ ಆಗಿರತಕ್ಕ ಅನ್ಯಾಯದ ವಿರುದ್ಧ ಅವರು ಸತ್ಯಾಗ್ರಹ ನಡೆಸುತ್ತಿದ್ದರೂ ಅವರ ಬೇಡಿಕೆ ಈಡೇರಲಿಲ್ಲ. ಇದು ಬಹಳ ವಿಷಾದದ ವಿಚಾರ. ಸರ್ಕಾರ ಈ ಬಗ್ಗೆ ತೀವ್ರ ಆಲೋಚನೆ ಮಾಡಿ, ಹಿರಿಯ ನಾಯಕರುಗಳು, ಸಚಿವರು, ಆಡಳಿತ ಪಕ್ಷದಲ್ಲಿರತಕ್ಕವರು ಇಷ್ಟರೊಳಗೆ ಈ ವಿಚಾರವನ್ನು ಕೈಗೆತಿಕೊಂಡು ಒಂದು ನಿರ್ಣಯ ಕೊಡಬೇಕಾಗಿತ್ತು. ಇದು ಸದನದ ಮುಂದೆ ಬರುವುದಕ್ಕೆ ಅವಕಾಶ ಕೊಡಬಾರದಾಗಿತ್ತು. ಮೊನ್ನೆ ದಿವಸ ಮಾನ್ಯ ಸಭಾನಾಯಕರಾದ ವೀರೇಂದ್ರ ಪಾಟೀಲರು ನಾವು ೩೦೦ ರೂಪಾಯಿಗಳ ಸಂಬಳಕ್ಕೆ ತಾತ್ಕಾಲಿಕವಾಗಿ ಶಿಕ್ಷಕರನ್ನು ನೇಮಿಸಿಕೊಂಡಾಗ ೩೦೦ ರೂಪಾಯಿಗಳಿಗೆ ಶಿಕ್ಷಕರಂ ದುಡಿಯಬೇಕೇ ಎಂದಂ ಕೇಳಿದರು, ಇವತ್ತಿನ ದಿವಸ ನಾವು ದಿನಗೂಲಿಯನೇ ೧೨ ರೂಪಾಯಿ ಕೊಡುತ್ತಿದ್ದೇವೆಂದು ಹೇಳಿದರು. ಅಷ್ಟು ಕಡಿಮೆ ಸಂಬಳ ಪಡೆದರೆ ಅವರ ಹೆಂಡತಿ ಮಕ್ಕಳ ಗತಿ ಏನು ಎಂಬುದನ್ನು ಒಪ್ಪಿಕೊಳ್ಳುತ್ತಿದ್ದಾರೆ. ಆದರೆ ಸಹಕಾರ ಸಂಘದಲ್ಲಿರತಕ್ಕ ನೌಕರರು ಕೇವಲ ೫೦೦ ರೂಪಾಯಿಗಳ ಸಂಬಳಕ್ಕೆ ಹೇಗೆ ಕೆಲಸ ಮಾಡಬೇಕು ಎಂಬುದನ್ನು ವಿಚಾರ ಮಾಡಬೇಕು. ಸಾಲವನ್ನು ವಿತರಣೆ ಮಾಡತಕ್ಕ ಹಾಗೂ ಅದನ್ನು ವಸೂಲಿ ಮಾಡತಕ್ಕ ಕೆಲಸವನ್ನು ಅವರು ಮಾಡಬೇಕು. ಹಸಿರು ಕಾರ್ಡುದಾರರಿಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಬೇಕಂ. ಈ ದಿಸೆಯಲ್ಲಿ ವಿಚಾರ ಮಾಡಿದಾಗ ಅವರ ಬೇಡಿಕೆಗಳು ನ್ಯಾಯಯುತವಾಗಿ. ಆದ್ದರಿಂದ ಅವರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಿ ಸಹಕಾರ ಸಂಘಗಳಿಗೆ ಆಗಿರತಕ್ಕ ಹಾನಿಯನ್ನು ತುಂಬಿಕೊಡಬೇಕೆಂದು ಹೇಳುತ್ತೇನೆ. ಅನಾವೃಷ್ಟಿಯಿಂದ ರೈತರ ಬೆಳೆ ಹಾನಿಯಾಗಿರುವುದರಿಂದ ರೈತರು ಸಕಾಲದಲ್ಲಿ ಹಣ ಕಟ್ಟಲಿಲ್ಲ. ಈ ಕಾರಣದಿಂದ ತನ್ನ ಸಹಕಾರ ಸಂಘಗಳವರು ನೌಕರರಿಗೆ ಸಂಬಳ ಕೊಡುವುದಕ್ಕೆ ಆಗಲಿಲ್ಲ. ಸರ್ಕಾರ ಶೇಕಡ ೫೦ ರಷ್ಟು ಹಣವನ್ನಾದರೂ ಸಂಬಳಕ್ಕಾಗಿ ಕೊಡಬೇಕು ಅಪೆಕ್ಸ್ ಬ್ಯಾಂಕಿನಿಂದ ಹಣ ಕೊಡಿಸಬೇಕು. ಆ ನೌಕರರ ಸಮಸ್ಯೆಯನ್ನು ಸರ್ಕಾರ ಬಗೆಹರಿಸಿ ನ್ಯಾಯ ದೊರಕಿಸಿಕೊಡಬೇಕು. ಇಲ್ಲದೇ ಹೋದರೆ ಸಮಗ್ರ ಗ್ರಾಮೀಣ ಜನತೆಗೆ ತೊಂದರೆಯಾಗುತ್ತದೆ. ಇವತ್ತೇ ಈ ಬಗ್ಗೆ ನಿರ್ಧಾರ ತೆಗೆದುಕೊಂಡು ಅವರಂ ಸತ್ಯಾಗ್ರಹ ನಿಲ್ಲಿಸುವಂತೆ ಮಾಡಿ ಜನತಾದಳದ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿತ್ತು ಅದನ್ನು ಅಂದರೆ ಆಹಾರಧಾನ್ಯ ವಿತರಣೆ, ಬಟ್ಟೆ ವಿತರಣೆ ಕಾರ್ಯವನ್ನು ತೀವ್ರವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಶೂನ್ಯವಾಗಬಾರದು. ಯಾವುದಾದರೂ ವ್ಯವಸ್ಥೆ ಮಾಡಿ. ಹೀಗೇ ಮಾಡಿ ಎಂದು ನಾವು ಹೇಳುವುದಿಲ್ಲ. ನಿಮ್ಮ ಶೂನ್ಯ ಪ್ರತಿಕ್ರಿಯೆಯನ್ನು ತೋರಿಸುವುದಕ್ಕೆ ಮುಂಚೆ ಏನಾದರೂ ಹೇಳಿ. ಸದನದ ಸಮಿತಿ ಮಾಡುತ್ತೇವೆ, ಕ್ಯಾಬಿನೆಟ್ ಸಬ್‌ಕಮಿಟಿ ಮಾಡುತ್ತೇವೆ ಅಥವಾ ತಜ್ಞರ ಸಮಿತಿ ಮಾಡುತ್ತೇವೆ ಅಥವಾ ಅಜ್ಜೀಬಾಳೆ ಹೆಗಡೆಯವರ ವರದಿ ಒಪ್ಪಿಕೊಳ್ಳುತ್ತೇವೆ. ಈ ತರಹ ಯಾವುದಾದರೂ ಒಂದು ಮಾತು ಹೇಳಿ. ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ. ಅವರಿಗೆ ಸ್ಟೈಕ್ ವಿತ್‌ಡ್ರಾ ಮಾಡಿ ಎಂದು ಹೇಳಿ, ಎಲ್ಲರೂ ಒಟ್ಟಿಗೆ ಕುಳಿತು ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಮುನಿಸಿಪಲ್ ಆಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನಲ್ಲಿ ಇದೇ ತರಹ ಪರಿಸ್ಥಿತಿ ಇತ್ತು. ಈಗ ಅದನ್ನು ಸರಿಪಡಿಸಿದ್ದಾರೆ. ಅಲ್ಲಿ ಯಾವ ರೀತಿ ಸರಿಪಡಿಸಿದ್ದಾರೋ ಅದೇ ರೀತಿ ಇಲ್ಲೂ ಸರಿಪಡಿಸಬಹುದು. ಆ ರೀತಿ ಇಲ್ಲೂ ಕ್ರಮ ತೆಗೆದುಕೊಳ್ಳಲಿ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಈ ಸೆಕ್ರೆಟರಿಗಳ ಕೆಲಸದ ಅವಶ್ಯಕತೆ ಬಹಳ ಇದೆ...

ಅಧ್ಯಕ್ಷರು.—ನಿಮ್ಮ ಹೆಸರನ್ನು ಕರೆದಾಗ ನೀವು ಇರಲಿಲ್ಲ. ಈಗ I have called the Minister. Nothing will go on record. * *

ಅಧ್ಯಕ್ಷರು.—ನಾನು ಈಗ ಸಚಿವರನ್ನು ಕರೆದಿದ್ದೇನೆ.

ಶ್ರೀ ಸಿದ್ದನಗೌಡ ಪಾಟೀಲ್.—ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಮಾತನಾಡಿ.

ಶ್ರೀ ಸಿದ್ದನಗೌಡ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೆ, ಈ ಸ್ಟೈಕ್ ಮುಂದುವರೆಯಬೇಕು ಎಂದು ಸರ್ಕಾರದ ಇಚ್ಛೆ ಇದೆಯೋ ಏನೋ ನನಗೆ ಗೊತ್ತಾಗುತ್ತಿಲ್ಲ. ಸಂಪು ಮಾಡುತ್ತಿರುವವರು ಕುಳಿತಿರುವ ಟೆಂಟ್ ನೋಡಿದರೆ ಅದು ಬೇಸಿಗೆಯ ಸ್ಥಿತಿಯಲ್ಲಿದೆ. ಟೆಂಟ್ ಬಿದ್ದರೆ ಅವರು ಉಳಿಯುತ್ತಾರೋ ಇಲ್ಲವೋ ಎಂಬ ಪರಿಸ್ಥಿತಿ ಇದೆ. ಮಹಾರಾಷ್ಟ್ರ ಸರ್ಕಾರದಲ್ಲಿ ನಿರ್ದಿಷ್ಟವಾಗಿ ಏನು ಪಗಾರ ಕೊಡುತ್ತಿದ್ದಾರೆ ಅದೇ ರೀತಿ ಇಲ್ಲೂ ಪಗಾರವನ್ನು ಸರ್ಕಾರದವರು ಕೊಡಬೇಕು. ೧೪ ಸಾವಿರ ನೌಕರರು ಇವತ್ತು ಕಷ್ಟದಲ್ಲಿದ್ದಾರೆ. ೧೫೦ ರೂಪಾಯಿನಲ್ಲಿ ಜೀವನ ಮಾಡುವುದು ಕಷ್ಟ ಇದೆ. ಸರ್ಕಾರಿ ನೌಕರರಿಗೆ ಯಾವ ತರಹ ಸೌಲಭ್ಯಗಳನ್ನು ಕೊಡುತ್ತೀರೋ ಅದೇರೀತಿ ಸೌಲಭ್ಯಗಳನ್ನು ಈ ನೌಕರರಿಗೂ ಕೊಡಬೇಕು ಹಾಗೂ ಕೆ.ಸಿ.ಎಸ್.ಆರ್.ನ್ನು ಇವರಿಗೂ ಅನ್ವಯಿಸಬೇಕು ಎಂದು ಹೇಳುತ್ತೇನೆ.

ಶ್ರೀಮತಿ ಮನೋರಮಾ ಬಂಧ್ವರಾಜ್ (ಸಹಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಏನು ನಮ್ಮ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ನೌಕರರು ಕಳೆದ ಸೆಪ್ಟೆಂಬರ್ ೫ ರಿಂದ ಧರಣಿ ಹೂಡಿದ್ದಾರೆ. ಅವರ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇಷ್ಟು ದಿವಸ ಅದರೂ ಸರ್ಕಾರ ಅಥವಾ ಸಚಿವರು ಅವರನ್ನು ಕರೆಸಿ ಮಾತನಾಡಲಿಲ್ಲವೇ ಎಂದು ಮಾನ್ಯ ಸದಸ್ಯರೊಬ್ಬರು ಕೇಳಿದರು. ನಾನು ಕರೆಸಿ ಮಾತನಾಡಿದ್ದೇನೆ. ಅವರು ಈಗಲೇ ಆಶ್ವಾಸನೆ ಕೊಡಬೇಕೆಂದು ಕೇಳಿದರು. ಅದಕ್ಕೆ ನಾನು ಪರಿಶೀಲಿಸುತ್ತೇನೆ, ಈಗತಾನೇ ಅಧಿಕಾರಕ್ಕೆ ಬಂದಿದ್ದೇವೆ ಎಂದು ಹೇಳಿದೆ ೧೯೮೬ನೇ ಇಸವಿಯಿಂದ ಅವರ ಬೇಡಿಕೆಗಳಿವೆ. ಹಿಂದಿನವರು ಆಶ್ವಾಸನೆ ಕೊಟ್ಟಿದ್ದರೂ ನಮ್ಮ ಬೇಡಿಕೆಯನ್ನು ಈಡೇರಿಸಲಿಲ್ಲ, ನೀವು ಸರಿಯಾಗಿ ಹೇಳಿ ಎಂದು ಕೇಳಿದರು. ನಿಮಗೆ ನಾನು ಕೆಲಸ ಮಾಡಿಕೊಡಬೇಕೋ ಅಥವಾ ಬರೀ ಭರವಸೆ ಕೊಡುವ ಮಂತ್ರಿಯಾಗಬೇಕೋ ಎಂದು ಅವರನ್ನು ಕೇಳಿದೆ ಹಾಗೂ ಈಗಿಂದೀಗಲೇ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೇನೆ. ನೀವು ಧರಣಿಯನ್ನು ನಿಲ್ಲಿಸಿ, ಮತ್ತೆ ನಾವು ಸಮಾಲೋಚಿಸುತ್ತೇವೆ ಎಂದು ಹೇಳಿದರೂ ಅವರು ಕೇಳಲಿಲ್ಲ.

೧೦–೩೦ ಎ. ಎಂ.

ಮತ್ತೆ ಬೇಕಾದರೆ ಸಮಾಲೋಚನೆ ಮಾಡುತ್ತೇವೆಂದು ಹೇಳಿದರೂ ಸಹ ಅವರು ಕೇಳಲಿಲ್ಲ. ನಿನ್ನೆ ಕೂಡಾ ನಾನು ಅಧಿಕಾರಿಗಳ ಸಮಕ್ಷಮದಲ್ಲಿ ಮಾತನಾಡಿದ್ದೇನೆ. ಅದಕ್ಕೆ ಅವರು ಏನಾದರೂ ಆಶ್ವಾಸನೆ ಕೊಡಬೇಕು ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘಗಳ ನೌಕರರು ಸರ್ಕಾರದ ಮುಂದೆ ಬರುವುದು ಅಷ್ಟು ಸಮಂಜಸವಲ್ಲ. ಏನಾದರೂ ಸಹಕಾರ ಸಂಘಗಳಲ್ಲಿ ನಷ್ಟವಾದರೆ ಅವರು ಸರ್ಕಾರದ ಬಳಿ ಹೋದರೆ ಎನ್‌ಸಿಡಿಸಿನಿಂದ ಅವುಗಳಿಗೆ ಸಹಾಯ ಕೊಡಿಸಿ ಅವರ ಸಂಬಳ ಇತ್ಯಾದಿಗಳನ್ನು ಕೊಡಿಸಬಹುದೇ ಹೊರತು ಸರ್ಕಾರ ಈ ಬಗ್ಗೆ ಆಶ್ವಾಸನೆಯನ್ನು ತಕ್ಷಣದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಒಂದು ವರದಿಯನ್ನು ಕೊಡುವುದಕ್ಕೆ ಅಧಿಕಾರಿಗಳ ಹತ್ತಿರ ಹೇಳಿದ್ದೇನೆ. ಅದು ಬಂದಮೇಲೆ ಅದರ ಬಗ್ಗೆ ಪರಿಶೀಲಿಸುತ್ತೇನೆನ್ನುವ ಆಶ್ವಾಸನೆಯನ್ನು ಈ ಸದನದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದೇ ಒಂದು ಕ್ಲಾರಿಫಿಕೇಷನ್.

ಅಧ್ಯಕ್ಷರು.—ಯಾವುದೇ ಕ್ಲಾರಿಫಿಕೇಷನ್ಸ್‌ಗೆ ಅವಕಾಶ ಇಲ್ಲ. ಈಗ ಮಾನ್ಯ ವಾಟಾಳ್‌ನಾಗರಾಜ್ ಅವರು ಚರ್ಚೆ ಪ್ರಾರಂಭಿಸಲಿ.

(೭–೪೫ ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದುದರಿಂದ ಗೊಂದಲವೇರ್ಪಟ್ಟಿತು.)

---

* (ಅಧ್ಯಕ್ಷರ ಆದೇಶದಂತೆ ಮಾನ್ಯ ಸದಸ್ಯರ ಮಾತುಗಳನ್ನು ದಾಖಲಿಸಲಿಲ್ಲ.)

ಅಧ್ಯಕ್ಷರು.—ಮಾನ್ಯ ಸದಸ್ಯರು ನನ್ನ ಜೊತೆ ಸಹಕರಿಸಬೇಕು. ಈಗಾಗಲೇ ಹತ್ತೂವರೆ ಗಂಟೆ ಆಗಿದೆ. ನಮಗೆ ಸಮಯ ಪ್ರಜ್ಞೆ ಇಲ್ಲದಿದ್ದರೆ ಈ ಸದನದಲ್ಲಿ ಕೆಲಸ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ,—ಒಂದೇ ಒಂದು ಕ್ಲಾರಿಫಿಕೇಷನ್.

ಅಧ್ಯಕ್ಷರು.—ನಾನು ಎದ್ದು ನಿಂತಿದ್ದೇನೆ. ೧೦ ಜನ ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಹತ್ತಿರ ಕ್ಲಾರಿಫಿಕೇಷನ್ ಕೇಳಿದ್ದಾರೆ. ಸಾಯಂಕಾಲದವರೆಗೆ ಕೇಳಿದರೂ ಅವರು ಪರಿಶೀಲನೆ ಮಾಡುತ್ತೇನೆ ಎಂದು ಅದೇ ಉತ್ತರ ಕೊಡುತ್ತಾರೆ. ಈ ಸದನದ ಕಾರ್ಯಕಲಾಪ ರೂಪಿಸಕ್ಕೆ ಸಮಿತಿಯಲ್ಲಿ ಈಗಾಗಲೇ ತೀರ್ಮಾನವಾಗಿದೆ. ಆ ತೀರ್ಮಾನದ ಪ್ರಕಾರ ೧೧ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲದ ಬಗ್ಗೆ ನಡೆದ ಚರ್ಚೆಯ ಬಗ್ಗೆ ಉತ್ತರವನ್ನು ಕೊಡುವುದಕ್ಕೆ ಬರುತ್ತಾರೆ. ಇದು ನನ್ನಿಂದಾದಂಥ ನಿರ್ಧಾರವಲ್ಲ ಇದು ಮಾನ್ಯ ವಿರೋಧ ಪಕ್ಷದ ನಾಯಕರೂ, ಮಾನ್ಯ ಬಿಜೆಪಿ ನಾಯಕರೂ ಎಲ್ಲರೂ ಸೇರಿ ಮಾಡಿರತಕ್ಕ ತೀರ್ಮಾನ. ಇದುವರೆಗೆ ರಾಜ್ಯಪಾಲರ ಭಾಷಣಾ ನಿರ್ಣಯದ ಮೇಲೆ ೬೬ ನಿಮಿಷಗಳ ಕಾಲ ಚರ್ಚೆಯಾಗಿದೆ. ಆದರಲ್ಲಿ ಕಾಂಗ್ರೆಸ್‌ನವರು ೨೨೭ ನಿಮಿಷಗಳನ್ನು ಜನತಾ ದಳದವರು ೨೬೩ ನಿಮಿಷಗಳನ್ನು ಬಿಜೆಪಿಯವರು ೭೨ ನಿಮಿಷಗಳನ್ನು ಉಪಯೋಗಿಸಿಕೊಂಡಿದ್ದಾರೆ. ಇನ್ನೂ ಜನತಾ ಪಾರ್ಟಿಯವರ ಸರದಿ ಬಂದಿಲ್ಲ. ರೈತ ಸಂಘದವರು ೧೫ ನಿಮಿಷಗಳನ್ನು, ಮುಸ್ಲಿಂಮ್ ಲೀಗ್‌ನವರು ೪೭ ನಿಮಿಷಗಳನ್ನು, ಪಕ್ಷೇತರರು ೪೫ ನಿಮಿಷಗಳನ್ನು ಉಪಯೋಗ ಮಾಡಿಕೊಂಡಿದ್ದಾರೆ. ಈಗ ಜನತಾ ಪಾರ್ಟಿಯವರು ಭಾಷಣ ಮಾಡಬೇಕು, ಎಂಇಎಸ್ ಸದಸ್ಯರು ಭಾಷಣ ಮಾಡಬೇಕಂ ಹಾಗೂ ಎಐಎಡಿಎಂಕೆ ಪಕ್ಷದವರು ಭಾಷಣ ಮಾಡಬೇಕಾಗಿದೆ. ಆ ನಂತರ ಸರ್ಕಾರದಿಂದ ಉತ್ತರ ಬರತಕ್ಕದ್ದು ಇದೆ. ನನ್ನ ಸ್ಥಾನದಲ್ಲಿ ಮಾನ್ಯ ಯಡಿಯೂರಪ್ಪನವರೇ ಇದ್ದಿದ್ದರೆ ಹೇಗೆ ಸಮಯವನ್ನು ನಿಯಂತ್ರಣ ಮಾಡುತ್ತಾರೆ ? ಹೇಗೆ ಸಮಯವನ್ನು ಸಮನ್ವಯ ಮಾಡಬೇಕೆಂದು ಅವರೇ ಪರ್ಯಾಲೋಚನೆ ಮಾಡಬೇಕು. ನಿಮ್ಮ ಉದ್ದೇಶ ಈಗ ಸಫಲವಾಗಿದೆ. ನೀವು ಸರ್ಕಾರದ ಗಮನವನ್ನು ಸೆಳೆದಿದ್ದೀರಿ, ಆ ಮೂಲಕ ಸಾರ್ವಜನಿಕರ ಗಮನವನ್ನು ಸೆಳೆದಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ಮಾತ್ರ ತಾವು ಅವಕಾಶ ಮಾಡಿಕೊಡಬೇಕು. ಸರ್ಕಾರ ಆಶ್ವಾಸನೆಯನ್ನು ಕೊಟ್ಟಂತಹ ಒಂದು ಪತ್ರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಈ ಸದನದಲ್ಲಿ ಮಾತನಾಡಲು ಎಲ್ಲರಿಗೂ ಒಳ್ಳೆಯ ರೀತಿಯಲ್ಲಿ ಅವಕಾಶ ಮಾಡಿಕೊಡುತ್ತಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು. ಒಂದು ವಿಚಾರವನ್ನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆಳುವ ಪಕ್ಷದ ಸದಸ್ಯರು ಮಾತನಾಡುತ್ತಾ, ಹಿಂದಿನ ಸರ್ಕಾರ ಈ ಬಗ್ಗೆ ಏನು ಮಾಡುತ್ತಿತ್ತು ಎಂದು ಕೇಳಿದರು ಆ ಸರ್ಕಾರ ಈ ಸರ್ಕಾರ ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಸರ್ಕಾರದ ಪ್ರತಿನಿಧಿಗಳು ಅಂದರೆ ಎಲ್ಲರೂ ಒಂದೇ ಹಿಂದಿನ ಸರ್ಕಾರ ಅಜ್ಜೀಬಾಳ ಹೆಗಡೆಯವರ ಸಮಿತಿಯನ್ನು ನೇಮಕ ಮಾಡಿತ್ತು, ಆ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆಯೇ ? ಅದು ಈಗ ತಮ್ಮ ಕೈಸೇರಿದೆಯೇ ? ಮಾನ್ಯ ಅಜ್ಜೀಬಾಳ ಹೆಗಡೆಯವರು ದಿನಾಂಕ ೩೦-೩-೧೯೮೯ರಂದು ಒಂದು ಪತ್ರವನ್ನು ಬರೆದಿದ್ದಾರೆ ಅದು ಈ ರೀತಿ ಇದೆ.

"ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳ ನೌಕರರ ಯೂನಿಯನ್ ಅವರಿಗೆ—

ವಿಷಯ : ಮುಖ್ಯಮಂತ್ರಿಗಳ ಭರವಸೆ.

ಉಲ್ಲೇಖ : ತಾರೀಖು ೨೮-೩-೧೯೮೯ರ ಮಾತುಕತೆ ಕುರಿತು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಪ್ರತಿನಿಧಿಗಳೊಂದಿಗೆ ಮಾನ್ಯ ಮುಖ್ಯ ಮಂತ್ರಿಗಳು ನಡೆಸಿದ ಮಾತುಕತೆ ಸಮಯದಲ್ಲಿ ನೌಕರರ ಬೇಡಿಕೆಗಳಿಗೆ ಪೂರಕವಾಗಿ ನೇಮಿಸಲಾದ ಸಮಿತಿಯು ತನ್ನ ವರದಿಯನ್ನು ಎರಡು ವಾರಗಳಲ್ಲಿ ಸರಕಾರಕ್ಕೆ ಸಲ್ಲಿಸಲಿದ್ದು ವರದಿ ಸರ್ಕಾರಕ್ಕೆ ಬಂದ ತಕ್ಷಣ ಪುನಃ ನೌಕರರ ಪ್ರತಿನಿಧಿಗಳೊಂದಿಗೆ ಚರ್ಚಿಸಿ ನೌಕರರ ಬೇಡಿಕೆಗಳಿಗೆ ಪೂರಕವಾಗಿ ಸರಕಾರ ಸೂಕ್ತ ನಿರ್ಧಾರಕ್ಕೆ ಬರುವುದೆಂದು ಮಾಖ್ಯ ಮಂತ್ರಿಗಳ ಆಶ್ವಾಸನೆಯಂತೆ ನೌಕರರು ತಮ್ಮ ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದಕ್ಕೆ ಹಾಕಲು ನಿರ್ಧರಿಸಿರುವುದು ಸ್ವಾಗತಾರ್ಹ.

ಹೀಗೆ ಮಾನ್ಯ ಅಜ್ಜೀಬಾಳ ಹೆಗಡೆಯವರು ದಿನಾಂಕ ೩೦-೩-೮೯ ರಂದು ಪತ್ರವನ್ನು ನೌಕರರ ಸಂಘಕ್ಕೆ ಬರೆದಿದ್ದಾರೆ. ಆದರಲ್ಲಿ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ ಅದು ತಮ್ಮ ಕೈ ಸೇರಿದೆಯೇ ? ಪಕ್ಕದ ರಾಜ್ಯಗಳಲ್ಲಿ ಮಾಡಿರುವಂತೆ ನಿಮ್ಮ ಸರ್ಕಾರ ಮಾಡುವುದಕ್ಕೆ

ಏನು ತೊಂದರೆ ? ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಇದನ್ನು ಯಾವಾಗ ಬಗೆಹರಿಸುತ್ತೀರಿ ? ನೌಕರರು ಸಂಬಳವಿಲ್ಲದೆ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯ ? ಅಜ್ಜೀಬಾಳ ಹೆಗಡೆಯವರು ಬರೆದ ಪತ್ರದಲ್ಲಿ ಮುಖ್ಯಮಂತ್ರಿಗಳ ಆಶ್ವಾಸನೆ ಇದೆ. ಅದನ್ನು ಕಾರ್ಯರೂಪಕ್ಕೆ ತರುತ್ತೀರಾ ? ಅದರ ಬಗ್ಗೆ ನೇರವಾಗಿ ಸಚಿವರು ಉತ್ತರ ಕೊಡಬೇಕು ನಾನು ಇನ್ನೇನು ಪ್ರಶ್ನೆಗಳನ್ನು ಕೇಳುವುದಿಲ್ಲ. ನಿರ್ದಿಷ್ಟವಾಗಿ ಹೇಳಿ ಅವರ ವರದಿ ಕೈ ಸೇರಿದೆಯೇ ? ಹಿಂದಿನ ಸರ್ಕಾರ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಆಗಿಲ್ಲ. ಈಗ ತಾವು ಆಶ್ವಾಸನೆಯನ್ನು ಈಡೇರಿಸಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸರ್ಕಾರಿ ಮುಖ್ಯಸಚೇತಕರು).—ಮಾನ್ಯ ಸದಸ್ಯರು ಈಗಾಗಲೇ ಕ್ಲಾರಿಫಿಕೇಶನ್ ಕೇಳಿದ್ದಾರೆ. ಪುನಃ ಕೇಳುತ್ತೇನೆಂದು ಅರ್ಧಗಂಟೆ ಭಾಷಣ ಮಾಡಿದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್,—ಕಳೆದ ಅಧಿವೇಶನದಲ್ಲಿ ನಾವು ಅಲ್ಲಿದ್ದಾಗ ಎಷ್ಟು ಕಾಲಾವಕಾಶ ಕೊಟ್ಟಿದ್ದಾರೆ ?

(ಗೊಂದಲ)

ಶ್ರೀಮತಿ ವಿನೋರಮ ಮಾಧ್ವರಾಜ್.—ಮಾನ್ಯ ಅಧ್ಯಕ್ಷರೆ, ಅಜ್ಜೀಬಾಳ ಹೆಗಡೆಯವರ ವರದಿ ನಮ್ಮ ಕೈಗೆ ಸಿಕ್ಕಿದೆ. ನೌಕರರು ಏನು ಮಾಡುತ್ತಿದ್ದಾರೆ ಅದನ್ನು ಕೈ ಬಿಡಬೇಕೆಂದು ಹೇಳಿದಾಗ, ನಮಗೆ ಭರವಸೆಯನ್ನು ಹಿಂದಿನ ಸರ್ಕಾರ ಕೊಟ್ಟಿತ್ತು, ಅವರು ಕೊಟ್ಟಂತಹ ಭರವಸೆಯನ್ನು ಈಡೇರಿಸಲಿಲ್ಲವೆಂದು ಹೇಳಿದರು. ಅವರು ಹೇಳಿದ ಹಾಗೆ ನಾನು ಹೇಳುವುದಕ್ಕಾಗುವುದಿಲ್ಲ. ನಾನು ಈಗಾಗಲೇ ಹೇಳಿದ್ದೇನೆ, ನಾನು ಭರವಸೆಯ ಮಂತ್ರಿಯಾಗಲಾರೆ. ನನಗೆ ಕಾಲಾವಕಾಶ ಬೇಕು. ಮುಷ್ಕರದಿಂದ ತತ್‌ಕ್ಷಣ ಎದ್ದು ನಿಮ್ಮ ಕೆಲಸಕ್ಕೆ ಹೋಗಿಯೆಂದು ನಾನು ಮನವಿ ಮಾಡಿದರೂ ಇನ್ನೂ ಸ[illegible] ಕುಳಿತಿದ್ದಾರೆ. ಅವರಾಗಿದ್ದರೆ ಅವರುಗಳನ್ನು ತರಿಸಿ ವಿಚಾರ ಮಾಡುತ್ತೇನೆ. ಅವರ ಈ ಬೇಡಿಕೆ ೧೯೮೫ ರಿಂದ ಇದೆ. ಕಳೆದ ಆರು ವರ್ಷಗಳಿಂದ ಪರಿಹಾರ ಮಾಡಲಿಕ್ಕೆ ಆಗಲಿಲ್ಲ, ನಾವೀಗ ಬಂದು ೧೫ ದಿವಸಗಳಲ್ಲಿ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್. ಹೆಚ್. ಕೌಜಲಗಿ.—ನಾವು ಮಾಡಲಿಲ್ಲವೆಂದು ಈಗ ಈ ಕಡೆ ಕುಳಿತಿದ್ದೇವೆ. ಈಗ ನೀವು ಮಾಡಿ.

ಶ್ರೀಮತಿ ವಿನೋರಮ ಮಾಧ್ವರಾಜ್.—ಖಂಡಿತಾ ಈ ಬಗ್ಗೆ ಆಲೋಚನೆ ಮಾಡಿ ಸರ್ಕಾರ ತತ್ಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರೆ ನೀವು ಭಾಷಣ ಪ್ರಾರಂಭ ಮಾಡುವುದಕ್ಕೆ ಮೊದಲೇ ಹೇಳುತ್ತೇನೆ, ನೀವು ಎರಡು ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಬೇಕು.

## ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಲಾದ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ವಾಟಾಳ್ ನಾಗರಾಜ್.—ನಿಂತುಕೊಳ್ಳಲಿಕ್ಕೆ ಒಂದು ನಿಮಿಷ ಬೇಕು. ನಿಮ್ಮ ಗಮನ ಸೆಳೆಯುವುದಕ್ಕೆ ಒಂದು ನಿಮಿಷ ಬೇಕು. ಅಷ್ಟರಲ್ಲಿ ಎರಡು ನಿಮಿಷ ಮುಗಿದು ಹೋಗುತ್ತದೆ. ನಾನು ಬೆಳಗ್ಗಿನಿಂದ ನೋಡುತ್ತಿದ್ದೇನೆ, ನಿಮ್ಮ ಮುಖ ಕೋಪದಿಂದ ಕೂಡಿದಂತೆ ಇತ್ತು. ಈಗ ಪರವಾಗಿಲ್ಲ, ಸ್ವಲ್ಪ ನಗುತ್ತಾಡುತ್ತಿದ್ದೀರಿ. ೨೮ ಜೊತೆಗೆ ಒಂದು ಸೊನ್ನೆಯನ್ನು ಸೇರಿಸಿ ೨೮೦ ನಿಮಿಷಗಳ ಕಾಲಾವಕಾಶ ನನಗೆ ಕೊಟ್ಟರೆ ಉತ್ತಮ.

ಅಧ್ಯಕ್ಷರು.—ಶ್ರೀ ಭೈರೇಗೌಡರೇ, ನಿಮ್ಮ ಸಮಯವನ್ನು ಶ್ರೀ ವಾಟಾಳ್ ನಾಗರಾಜ್ ಅವರಿಗೆ ಕೊಡುತ್ತೀರಾ ?

ಶ್ರೀ ಸಿ. ಭೈರೇಗೌಡ.—ಇಲ್ಲ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನನ್ನದೂ ಒಂದು ಪಕ್ಷ. ೧೯೭೨ರಲ್ಲಿ ನನ್ನದೂ ಒಂದು ಪಕ್ಷವಾಗಿದ್ದು ನಾನು ಅಲ್ಲಿ ಮುಂದುಗಡೆ ಕುಳಿತಿದ್ದೆ. ನನ್ನದೊಂದು ಪಕ್ಷ ಇದೆ. ೨೫ ವರ್ಷಗಳಿಂದ